# ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ

# ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ

## ಸಿ.ಸಿ. ನಂ. 1970/2022

**ಚಾ.ಸಾ. - 5**
**ಪ್ರಾ.ಸಾ. - 4**

**ಸಾಕ್ಷಿದಾರರ ಹೆಸರು** ಃ ಪಾರೀಶಪ್ಪ ನಾಗಪ್ಪ ಸತ್ತೂರ

**ಸಾಕ್ಷಿದಾರರ ವಯಸ್ಸು** ಃ 57 ವರ್ಷ

**ಸಾಕ್ಷಿದಾರರ ಉದ್ಯೋಗ**ಃ ಅಬಕಾರಿ ಉಪನೀರಿಕ್ಷಕರು

**ಸಾಕ್ಷಿದಾರರ ವಿಳಾಸ** ಃ ಬೆಳಗಾವಿ

---

**ಪ್ರಮಾಣ ವಚನ ಮಾಡಿದ ದಿನಾಂಕ ಃ 16.03.2026.**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದಃ**

**2007** ರಿಂದ ಡಿಸೇಬಂರ **2022** ವರೆಗೆ ಬೈಲಹೊಂಗಲ ವಲಯದಲ್ಲಿ ಅಬಕಾರಿ ರಕ್ಷಕ ಎಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ **27.09.2022** ರಂದು ನಾನು ಚಾಸಾ **1,6** ರಿಂದ **9** ರವರೊಂದಿಗೆ ಸಂಜೆ **04.15** ಗಂಟೆಯಲ್ಲಿ ಬೆಳವಡಿಯಲ್ಲಿ ಗಸ್ತು ಮಾಡುತ್ತಿದ್ದಾಗ, ಚಾಸಾ **1** ರವರಿಗೆ ದೂರವಾಣಿ ಮೂಲಕ ಸೋಮೇಶ್ವರ ಸಕ್ಕರೆ ಕಾರ್ಖಾನೆ ಮುಂದೆ ಶಂಕಿತ ವ್ಯಕ್ತಿ ಅಕ್ರಮವಾಗಿ ಗಾಂಜಾ ಮಾರುತ್ತಿದ್ದಾನೆ ಎಂದು ಮಾಹಿತಿ ಬಂದಿರುತ್ತದೆ. ತಕ್ಷಣವೇ ಸದರಿ ಮಾಹಿತಿಯನ್ನು ಇಳಿಸಿಕೊಂಡು, ಮೇಲಾಧಿಕಾರಿಗಳಾದ ಚಾಸಾ **4** ರವರಿಗೆ ದೂರವಾಣಿ ಕರೆ ಮೂಲಕ ತಿಳಿಸಿರುತ್ತಾರೆ. ಚಾಸಾ **1** ರವರು ನನಗೆ ಪಂಚರನ್ನು ಕರೆದುಕೊಂಡು ಬರಲು ನಮ್ಮ ಅಬಕಾರಿ ಸಿಬ್ಬಂಧಿಯವಾರಾದ ನನಗೆ ಕಳುಹಿಸಿರುತ್ತಾರೆ. ನಾನು ಹಾಗೂ ಚಾಸಾ ರವರು **7** ಕೂಡಿಕೊಂಡು ಗ್ರಾಮಪಂಚಾಯತಿಗೆ ಹೋಗಿ ಚಾಸಾ **2** ಮತ್ತು **3** ರವರಿಗೆ ಪಂಚರಾಗಲು ಕೋರಿ ಅವರು ಒಪ್ಪಿ ಕೊಂಡ ಮೇರೆಗೆ, ಅವರನ್ನು ಸಾಯಂಕಾಲ **04.30** ನಿಮಿಷಕ್ಕೆ ಚಾಸಾ **1** ರವರ ಬಳಿ ಹಾಜರುಪಡಿಸಿರುತ್ತೇವೆ. ಸದರಿ ಶಂಕಿತ ಆರೋಪಿಯ ಅಂಗಶೋಧನೆಗೆ ಪತ್ರಾಂಕಿತ ಅಧಿಕಾರಿಗಳ ಅವಶ್ಯಕತೆ ಇದ್ದ ಕಾರಣ ಚಾಸಾ **4** ರವರಿಗೆ ಕರೆ ಮಾಡಿದಾಗ ಅವರು ಕೂಡ ಕೆಂಗಣ್ಣೂರು ಗ್ರಾಮದಲ್ಲಿ ಗಸ್ತು ತಿರುಗುತ್ತಿರುವುದಾಗಿ ಸ್ಥಳಕ್ಕೆ ಬರುವುದಾಗಿ ತಿಳಿಸಿರುತ್ತಾರೆ. ಸ್ವಲ್ಪ ಸಮಯದ ನಂತರ ಸದರಿ ಅಧಿಕಾರಿಗಳು ನಾವು ಇರುವ ಸ್ಥಳಕ್ಕೆ ಬಂದಿರುತ್ತಾರೆ. ಗಾಂಜಾ ತೂಕ ಮಾಡಲು ಕಿರಾಣಿ ಅಂಗಡಿಯಿಂದ ಡಿಜಿಟಲ್ ತಕ್ಕಡಿಯನ್ನು ಸಿಬ್ಬಂಧಿಗಳ ಸಹಾಯದಿಂದ ತರಿಸಿರುತ್ತೇನೆ. ಎಲ್ಲರೂ ಸೇರಿಕೊಂಡು ಬೆಳವಡಿಯಿಂದ ಬಾತ್ಮಿ ಸ್ಥಳಕ್ಕೆ ಹೋಗಿರುತ್ತೇವೆ. ಸ್ವಲ್ಪ ದೂರದಿಂದ ನೋಡಲಾಗಿ ಒಬ್ಬ ಶಂಕಿತ ವ್ಯಕ್ತಿಯು ಕಪ್ಪು ಬಣ್ಣದ ಪ್ಲಾಸ್ಟೀಕ ಚೀಲವನ್ನು ಹಿಡಿದುಕೊಂಡು

ನಿಂತಿರುವುದು ತಿಳಿದುಬಂತು. ತಕ್ಷಣವೇ ನಾವೇಲ್ಲರೂ ಶಂಕಿನ ವ್ಯಕ್ತಿಯ ಬಳಿ ಹೊದೆವು. ಸರ್ಕಾರಿ ವಾಹನ ಹಾಗೂ ನಮ್ಮ ಸಮವಸ್ತ್ರವನ್ನು ನೋಡಿ ಶಂಕಿನ ಆರೋಪಿ ಓಡಿ ಹೋಗಲು ಪ್ರಯತ್ನ ಪಟ್ಟನು. ಅಷ್ಟರಲ್ಲಿ ನಾವೇಲ್ಲರೂ ಸೇರಿ ಸುತ್ತುವರೆದು ಅವನನ್ನು ಹಿಡಿದುಕೊಂಡೆವು. ಸದರಿ ವ್ಯಕ್ತಿಯ ಹೆಸರು ಕೇಳಲಾಗಿ ಆತನು ತನ್ನ ಹೆಸರು ಮಹಾಂತೇಶ ಯಲ್ಲಪ್ಪ ಬಾಗೇವಾಡಿ ಎಂದು ತಿಳಿಸಿರುತ್ತಾರೆ. ಸದರಿ ಪ್ಲಾಸ್ಟಿಕ ಚೀಲವನ್ನು ಶೋಧಿಸಲು ಮಾನ್ಯ ನ್ಯಾಯಾಲಯದಿಂದ ಸರ್ಚ ವಾರಂಟ್ ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದ ಕಾರಣ ಎನ್ ಡಿ ಪಿ ಎಸ್ ಕಾಯ್ದೆ1985 ಕಲಂ 42 ರ ಪ್ರಕಾರ ಬದ್ದವಾದ ಅಧಿಕಾರವನ್ನು ಚಲಾಯಿಸಿ ಪಂಚರ ಹಾಗೂ ಪತ್ರಾಂಕಿತ ಅಧಿಕಾರಿಗಳ ಸಮಕ್ಷಮದಲ್ಲಿ ಶೋಧನ ಸಮೂಚಿತ ವರದಿಯನ್ನು ಚಾಸಾ 1 ರವರು ತಯಾರಿಸಿರುತ್ತಾರೆ. ಆರೋಪಿತನ ಅಂಗಶೋಧನೆ ಮಾಡುವ ಮುಂಚೆ ಪತ್ರಾಂಕಿತ ಅಧಿಕಾರಿಗಳ ಸಮಕ್ಷಮ ನಮ್ಮ ಹಾಗೂ ಸಿಬ್ಬಂಧಿಗಳ ಬಳಿ ಯಾವುದೇ ಎನ್ ಡಿ ಪಿ ಎಸ್ ಪದಾರ್ಥಗಳು ಇಲ್ಲದೇ ಇರುವುದನ್ನು ಖಚಿತಪಡಿಸಿಕೊಂಡು ನಾವೆಲ್ಲರೂ ಸೇರಿಕೊಂಡು ಸದರಿ ಪ್ಲಾಸ್ಟಿಕ ಚೀಲವನ್ನು ಪರಿಶೀಲಿಸಲಾಗಿ ಎಲೆ ಹೂ ಮತ್ತು ಬೀಜದಿಂದ ಕೂಡಿದ ಹಾಗೂ ಒಣಗಿದ ಗಾಂಜಾ ಕಂಡು ಬಂದಿತ್ತು .ಆರೋಪಿತನನ್ನು ವಿಚಾರಿಸಲಾಗಿ ಸ್ವಂತ ಪಾಯಿದೆಗೊಸ್ಸಕರ ಮಾರಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ .ವಾಹನದಲ್ಲಿ ತಂದಿದ್ದ ಡಿಜಿಟಲ್ ತಕ್ಕಡಿಯ ಸಹಾಯದಿಂದ ಸದರಿ ಗಾಂಜಾವನ್ನು ಪ್ಲಾಸ್ಟಿಕ ಸಮೇತ ತೂಕ ಮಾಡಿ ನೋಡಲಾಗಿ 300 ಗ್ರಾಂ ಒಣಗಿದ ಗಾಂಜಾ ಕಂಡು ಬಂತು. ನಂತರ ರಾಸಾಯನಿಕ ಪರೀಕ್ಷೆಗಾಗಿ ನ್ಯಾಯಾಲಯದ ಮುಂದೆ ತೆಗೆಯಬೇಕಾಗಿರುವ ಕಾರಣ ಸದರಿ ಮುದ್ದೆ ಮಾಲನ್ನು ಬಿಳಿ ಬಟ್ಟೆಯಿಂದ ಮುಚ್ಚಿ ಬಿಳಿ ದಾರದಿಂದ ಬಿಗಿದು, ಅರಗು ಕಾಯಿಸಿ ಹಾಕಿ ಕಚೇರಿ ಸೀಲ್ ನಂಬರ 585 ರಿಂದ ಸೀಲ್ ಮಾಡಿ ಅವುಗಳಿಗೆ ಚಾಸಾ 1 ರವರ ಹಾಗೂ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಲಾಯಿತು. ಸದರಿ ಪಂಚನಾಮೆಯನ್ನು ಸ್ಥಳದಲ್ಲಿ 05-00 ರಿಂದ 06.00 ಗಂಟೆವರೆಗೆ ಪಂಚನಾಮೆ ಜರುಗಿಸಿರುತ್ತೇವೆ. ಕೃತ್ಯದ ಬಗ್ಗೆ 3 ಛಾಯಾಚಿತ್ರಗಳನ್ನು ತಗೆದಿರುತ್ತೇವೆ. ಮುದ್ದೆ ಮಾಲನ್ನು ವಶಪಡಿಸಿಕೊಂಡು ಕೊಂಡು ಠಾಣೆಗೆ ಬಂದು ಚಾಸಾ 1 ರವರು ಗುನ್ನೆ ದಾಖಲಿಸಿರುತ್ತಾರೆ. ಸಾಕ್ಷಿ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ಗುರುತಿಸುವರು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಸಿ ಪಿ ವಕೀಲರಿಂದ**

ಇಲಾಖಾ ವಾಹನ ಸಂಖ್ಯೆ ಕೆ ಎ 22 ಜಿ 0822 ನೇದ್ದರಲ್ಲಿ ಬಟ್ಟೆ ಅರಗು, ಬೆಂಕಿ ಪಟ್ಟಣ, ದಾರ ಹಾಗೂ ಸೂಜಿ ಇದ್ದವು. ಅದನ್ನು ಹೊರತುಪಡಿಸಿ ಬೇರೆ ಯಾವುದೇ ಸಲಕರಣೆ ಇರಲಿಲ್ಲ. ನಮ್ಮ ವಾಹನದಲ್ಲಿ ಲ್ಯಾಪಟಾಪ ಹಾಗೂ ಪ್ರಿಂಟರ ಇರಲಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಮೊದಲು ದಿನಾಂಕ 03.10.2022 ರಂದು ಚಾಸಾ 12 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ನಾನು ನೀಡಿದ ಹೇಳಿಕೆಯಲ್ಲಿ ದಿನಾಂಕ 03.10.2022 ರಂದು ನಮೂದಿಸಿರುವುದಿಲ್ಲ. ಚಾಸಾ 12 ರವರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 7 ಹಾಗೂ ನಾನು ಪಂಚರನು ಕರೆದುಕೊಂಡು ಬರಲು ಹೋಗಿರುವ ಬಗ್ಗೆ

ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ಹೇಳಿಕೆಯಲ್ಲಿ ನಾನು ಒಬ್ಬನೇ ಪಂಚರನ್ನು ಕರೆದುಕೊಂಡು ಬರಲು ಹೋಗಿರುವುದಾಗಿ ತಿಳಿಸಿರುತ್ತೇನೆ. ಸದರಿ ಹೇಳಿಕೆಯ ಭಾಗವನ್ನು ನಿಶಾನೆ ಡಿ 1 ಎಂದು ಗುರುತಿಸಲಾಯಿತು. ಇಲಾಖಾ ವಾಹನದಲ್ಲಿ ದೂರವಾಣಿ ಸೌಲಬ್ಯ ಇರಲಿಲ್ಲ. ಡಿಜಿಟಲ್ ತಕ್ಕಡಿಯನ್ನು ಎಲ್ಲಿಂದ ತಂದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಗದ ಪತ್ರಗಳನ್ನು ದಿನಾಂಕ **27.09.2022** ರಂದು **04.15** ರಿಂದ ಸಂಜೆ **06.00** ಗಂಟೆವರೆಗೆ ಯಾವುದೇ ಕಾಗದವನ್ನು ಬೆರಳಚ್ಚು ಮಾಡಿಸಿರುವುದಿಲ್ಲ. **04.15** ಗಂಟೆಗೆ ಪಂಚರನ್ನು ಕರೆಯಲು ಹೋದಾಗ ಇಲಾಖಾ ವಾಹನವನ್ನು ಬೆಳವಡಿ ಸರ್ಕಲನಲ್ಲಿ ನಿಲ್ಲಿಸಿರುತ್ತೇವೆ. ಘಟನಾ ಸ್ಥಳದ ಸೋಮೆಶ್ವರ ಸಕ್ಕರೆ ಕಾರ್ಖಾನೆಯ ಯಾವುದೇ ದಿಕ್ಕಿನಲ್ಲಿ ಸಿದ್ದಸಮುದ್ರಕ್ಕೆ ಗ್ರಾಮಕ್ಕೆ ಹೋಗುವ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕಾಲುದಾರಿ ದಕ್ಷಿಣ ದಿಕ್ಕಿನಿಂದ ಗುನ್ಹಾ ಸ್ಥಳದಿಂದ **200** ಮೀಟರ ಅಂತರದಲ್ಲಿ ಇರುತ್ತದೆ. ಅಲ್ಲಿ ಯಾವುದೇ ಕಾಲುದಾರಿ ಹಾಗೂ ಪಕ್ಕಾ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ **1** ರವರಿಗೆ ಗಾಂಜಾ ಮಾರಾಟದ ಬಗ್ಗೆ ದೂರವಾಣಿ ಕರೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಬಾತ್ಮಿ ಆಧಾರದ ಮೇಲೆ ಗುನ್ಹಾ ಸ್ಥಳಕ್ಕೆ ಹೋಗಿ ಆರೋಪಿಯನ್ನು ಶೋಧಿಸಿ ಗಾಂಜಾವನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸೋಮೆಶ್ವರ ಸಕ್ಕರೆ ಕಾರ್ಖಾನೆಯ ಬಳಿಯೇ ಆರೋಪಿಯ ಸ್ವಂತ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಇಲಾಖಾ ಅಂಕಿ ಸಂಖ್ಯೆಗೊಸ್ಕರ ಸುಳ್ಳು ಪ್ರಕರಣವನ್ನ ದಾಖಲಿಸಲಾಗಿದ್ದು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ದಿನಾಂಕದಂದು ಯಾವುದೇ ದಾಳಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವ ರೀತಿಯಿಂದ ಪೋಟೋಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ